I/362497/2022

**ಕರ್ನಾಟಕ ಸರ್ಕಾರ**
**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru- 03
Telephone: 080 23367123
Email:apccfpr@gmail.com

E-office No.:KFD/HOFF/B4(EST)/ 67/2022-PnR **E -972085**
Date:- 29-12-2022

## ಅಧಿಕೃತ ಜ್ಞಾಪನ

**ವಿಷಯ:-** ದಿನಾಂಕ:01-01-2020 ರಿಂದ 09-12-2021 ರವರೆಗೆ **ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK)** ಅಧೀಕ್ಷಕರ (Superintendent) ವೃಂದದ ರಾಜ್ಯಮಟ್ಟದ ಕರಡು ಜ್ಯೇಷ್ಟತ ಪಟ್ಟಿ (Draft Seniority List)ಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:-
1. ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ4/ಸಿಬ್ಬಂದಿ/ಸಿಆರ್-106/2020-21, ದಿನಾಂಕ: 28-06-2021.
2. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957 ರನಿಯಮ-10.
3. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಸಿಆಸುಇ 106 ಸೇನೆನಿ 2021, ದಿನಾಂಕ: 10-12-2021.

**ಪ್ರಸ್ತಾವನೆ:**

1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಟತೆ) ನಿಯಮಾವಳಿ 1957ರ ನಿಯಮ 10ರನ್ವಯ ಪ್ರತಿಯೊಂದು ಸಾಲಿನಲ್ಲಿ ಪ್ರತಿಯೊಂದು ವೃಂದದಲ್ಲಿನ ಅಧಿಕಾರಿ/ಸಿಬ್ಬಂದಿಗಳ ಜ್ಯೇಷ್ಟತ ಪಟ್ಟಿ (Seniority List)ಯನ್ನು ತಯಾರಿಸುವುದು ಕಡ್ಡಾಯವಾಗಿರುತ್ತದೆ.

2. ಉಲ್ಲೇಖ (1)ರಲ್ಲಿನ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರದಲ್ಲಿ **ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK)** ಅಧೀಕ್ಷಕರ (Superintendent) ದಿನಾಂಕ: 27-04-1978 ರಿಂದ 31-12-2019 ರವರೆಗೆ ಜೇಷ್ಠತಾ ನಿಯಮಗಳನ್ವಯ ಜೇಷ್ಠತಾ ಪಟ್ಟಿ (Seniority List) ಯನ್ನು ಅಂತಿಮವಾಗಿ ಜೇಷ್ಠತಾ ಕ್ರಮ ಸಂಖ್ಯೆ 1 ರಿಂದ 20 ರವರೆಗೆ ಪ್ರಕಟಿಸಲಾಗಿರುತ್ತದೆ.

3. ಈ ಮಧ್ಯೆ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 106 ಸೇನೆನಿ 2021 ದಿನಾಂಕ:10.12.2021ರಲ್ಲಿ *"ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ಪ್ರತಿಶತ ಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿದ ಅನುಪಾತ/ಪ್ರತಿಶತದನ್ವಯ ಹುದ್ದೆ ಆದಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಳಿಗೆ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದಲ್ಲಿನ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಾಲಿಕ ಹುದ್ದೆಗಳು ಸಹ ಒಳಗೊಂಡಿರುತ್ತವೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿ ಮಾಡತಕ್ಕದ್ದು"* ಎಂದು ತಿಳಿಸಲಾಗಿದೆ. ಮುಂದುವರೆದು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:DPAR 48 SSR 75 ದಿನಾಂಕ: 05.07.1976ರಲ್ಲಿ ಬ್ಲಾಕ್ ಅವಧಿಯನ್ನು ವಿಂಗಡಿಸುವ ಕುರಿತು ಮಾರ್ಗಸೂಚಿಗಳನ್ನು ನಿಗದಿಪಡಿಸಿದ್ದು, ಈ ಅಧಿಕೃತ ಜ್ಞಾಪನದ ಕಂಡಿಕೆ 3 (c) ರಂತೆ ನೇರ ನೇಮಕಾತಿ ಮತ್ತು ಬಡ್ತಿಯ ನಡುವೆ ಅನುಪಾತವು ದಿನಾಂಕ:10.12.2021ರ ಆದೇಶದಂತೆ ಬದಲಾವಣೆಗೊಂಡಿದ್ದರಿಂದ

I/362497/2022

ದಿನಾಂಕ:01.01.2020ರಿಂದ ಆರಂಭವಾಗುವ ಬ್ಲಾಕ್ ಅವಧಿಯನ್ನು ದಿನಾಂಕ:09.12.2021ಕ್ಕೆ ಮುಕ್ತಾಯಗೊಳಿಸಬೇಕಾಗಿರುತ್ತದೆ.

4. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957ರ ನಿಯಮ 10ರ ಅನ್ವಯ ಹಾಗೂ ಸರ್ಕಾರಿ ಆದೇಶಗಳು/ಸುತ್ತೋಲೆಗಳನ್ನು ಅನುಸರಿಸಿ ದಿನಾಂಕ: 01-01-2020 ರಿಂದ 09-12-2021ರವರೆಗಿನ ಅವಧಿಯಲ್ಲಿ ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) ಅಧೀಕ್ಷಕರ (Superintendent) ವೃಂದಕ್ಕೆ ಯಾವುದೇ ಮುಂಬಡ್ತಿಗಳು ಆಗಿರುವುದಿಲ್ಲ. ಆದಾಗ್ಯೂ ದಿನಾಂಕ:01-01-2020 ರಿಂದ 09-12-2021ರವರೆಗಿನ ಅವಧಿಗೆ ಸದರಿ ಅವಧಿಯಲ್ಲಿ ಉದ್ಭವವಾದ ಅಧೀಕ್ಷಕರ ಹುದ್ದೆಗಳ ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಸದರಿ ವೃಂದದಲ್ಲಿ ಯಾವುದೇ ಬಡ್ತಿಯನ್ನು ನೀಡದ ಕಾರಣ ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) ಅಧೀಕ್ಷಕರ (Superintendent) ಕರಡು ಜೇಷ್ಠತಾ ಪಟ್ಟಿ (Draft Seniority List) ಯನ್ನು ಅನುಬಂಧ-2 ರಲ್ಲಿ ಶೂನ್ಯ ಮಾಹಿತಿಯೊಂದಿಗೆ ಪ್ರಕಟಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ದಿನಾಂಕ: 01-01-2020ರಿಂದ 09-12-2021ರ ವರೆಗಿನ ಅವಧಿಗೆ **ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) ಅಧೀಕ್ಷಕರ** (Superintendent) ಕರಡು ಜೇಷ್ಠತಾ ಪಟ್ಟಿ (Seniority List)ಯನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಪ್ರಕಟಿಸಿ ಆದೇಶಿಸಿದೆ.

ಈ ಕರಡು ಜ್ಯೇಷ್ಠತ ಪಟ್ಟಿಯ ಕುರಿತು ಬಾದಿತರಾದವರು ಆಕ್ಷೇಪಣೆಗಳನ್ನು **ಸ್ಪಷ್ಟ ರೀತಿಯಲ್ಲಿ ಪೂರಕ ಸಮರ್ಥನೀಯ ದಾಖಲಾತಿಗಳೊಂದಿಗೆ** ಇಲಾಖೆಯ ವೆಬ್ ಸೈಟ್ www.aranya.gov.inರಲ್ಲಿ ಈ ಆದೇಶವನ್ನು ಪ್ರಕಟಿಸಿದ 21 ದಿನಗಳೊಳಗಾಗಿ ಈ ಕಚೇರಿಯ ಸಂಬಂಧಿಸಿದ ಶಾಖೆಯ ಇ-ಮೇಲ್ ವಿಳಾಸ "b4sec.pccf@gmail.com" ರ ಮೂಲಕ ಸಲ್ಲಿಸಬಹುದಾಗಿದೆ.

ಇತರೆ ಮಾದ್ಯಮದ *[ಭೌತಿಕವಾಗಿ/ ಬೇರೆ ಇ-ಮೇಲ್ ಗಳಿಗೆ/ ದೂರವಾಣಿ/ ಸಾಮಾಜಿಕ ಮಾದ್ಯಮ (Social media) ಮುಂತಾದ ಇತರೆ ಮಾದ್ಯಮಗಳ]* ಮೂಲಕ ಕಳುಹಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಅಲ್ಲದೇ, ಅಸ್ಪಷ್ಟ ಆಕ್ಷೇಪಣೆಗಳನ್ನು ಹಾಗೂ ನಿಗದಿತ ದಿನಾಂಕ ಮೀರಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**Signed by Raj Kishore Singh, Ifs**
**Date: 31-12-2022 18:49:19**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ, ಮುಖ್ಯಸ್ಥರು)

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
2. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು- ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.

5. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ.
8. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
9. ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಗೆ – *ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ.*
10. ಎಲ್ಲಾ ಅಧೀಕ್ಷಕರ (Superintendent) ವೃಂದದ ಸಿಬ್ಬಂದಿಗಳಿಗೆ – ಇಲಾಖಾ ವೆಬ್‌ಸೈಟ್ ನಲ್ಲಿ ಈ ಪ್ರಕಟಣೆಯ ಮೂಲಕ.

I/362498/2022

# ಅನುಬಂಧ -1
## ಭಾಗ-1

## ಹುದ್ದೆಗಳ ವಾಸ್ತವಿಕ ಮಾಹಿತಿ

## ದಿನಾಂಕ: 01.01.2020 ರಿಂದ 09.12.2021 ರವರೆಗಿನ ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) 'ಅಧೀಕ್ಷಕರ (Superintendent) ರಾಜ್ಯಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft Seniority List)

| ಕ್ರ. ಸಂ | ವೃಂದದ ಹೆಸರು | ಬ್ಲಾಕ್ ಅವಧಿ | | ಬ್ಲಾಕ್ ಅವಧಿಯಲ್ಲಿ ಉದ್ಭವವಾದ ರಿಕ್ತ ಸ್ಥಾನಗಳು | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|---|---|---|
| | | ಇಂದ | ವರೆಗೆ | | | | | | ಹೆಚ್ಚುವರಿ | | ಕೊರತೆ | | | | |
| | | | | | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | |
| **1** | **2** | **2A** | **2B** | **2C** | **3** | **4** | **5** | **6** | **7** | **8** | **9** | **10** | **11** | **12** | **13** |
| 1 | ಅಧೀಕ್ಷಕರು (Superintendent) | 01.01.2020 | 09.12.2021 | 5 | - | 5 | - | 0 | - | 0 | - | (-) 5 | - | 5 | **2020:-** ನಿವೃತ್ತಿ ಆಗಿರುವುದಿಲ್ಲ **2021:-** ನಿವೃತ್ತಿ ಆಗಿರುವುದಿಲ್ಲ **2021:-** 5 ಮುಂಬಡ್ತಿ ಮೂಲಕ ಖಾಲಿಯಾಗಿರುವ ಹುದ್ದೆಗಳು. |

**ದಿನಾಂಕ:** 29-12-2022
**ಸ್ಥಳ:** ಬೆಂಗಳೂರು

Signed by Raj Kishore Singh, Ifs
Date: 31-12-2022 18:49:56

**ಪ್ರಧಾನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿ**
(ಅರಣ್ಯ ಪಡೆ, ಮುಖ್ಯಸ್ಥರು)

I/362499/2022

# ಅನುಬಂಧ-2

**ನೇರ ನೇಮಕಾತಿ ಅಥವಾ ಮುಂಬಡ್ತಿ ಮುಖಾಂತರ ಒಂದೇ ವಿಧಾನದಿಂದ ನೇಮಕಾತಿ ಮಾಡುವ ವೃಂದಗಳಿಗೆ ದಿನಾಂಕ:01-01-2020 ರಿಂದ 09-12-2021 ರವರೆಗೆ ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) ಅಧೀಕ್ಷಕರ (Superintendent) ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft seniority List).**

1. **ಇಲಾಖೆ :** ಕರ್ನಾಟಕ ಅರಣ್ಯ ಇಲಾಖೆ
2. **ವೃಂದದ ಹೆಸರು :** ಅಧೀಕ್ಷಕರ (Superintendent)
3. **ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ:** 19
4. **ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ:** ಮುಂಬಡ್ತಿ ವಿಧಾನ

ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಪ್ರಮುಅಸಂ (ಅಪಮು)/ಬಿ4/ ಸಿಬ್ಬಂದಿ/ ಸಿಆರ್-106/2020-2021, ದಿನಾಂಕ:28-06-2021ರಲ್ಲಿ ಅಧೀಕ್ಷಕರ ಜೇಷ್ಠತಾ ಪಟ್ಟಿಯನ್ನು ದಿನಾಂಕ:27-04-1978 ರಿಂದ 31-12-2019 ರವರೆಗೆ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) ಅಧೀಕ್ಷಕರ (Superintendent) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಜೇಷ್ಠತಾ ಕ್ರಮ ಸಂಖ್ಯೆ:01 ರಿಂದ 20 ರವರೆಗೆ ಈಗಾಗಲೇ ಅಂತಿಮವಾಗಿ ಪ್ರಕಟಿಸಲಾಗಿರುತ್ತದೆ.

**ದಿನಾಂಕ: 01-01-2020 ರಿಂದ 09-12-2021ರ ಅವಧಿಗೆ ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ (HK) ಅಧೀಕ್ಷಕರ (Superintendent) ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft seniority List).**

| ಕ್ರ. ಸಂ. | ಹೆಸರು | ವೇತನಶ್ರೇಣಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| ದಿನಾಂಕ: 01-01-2020 ರಿಂದ 09-12-2021ರ ವರೆಗೆ **ಕಲ್ಯಾಣ ಕರ್ನಾಟಕದ ಸ್ಥಳೀಯ ವೃಂದದ** (HK) ಅಧೀಕ್ಷಕರ (Superintendent) ವೃಂದದಲ್ಲಿ ಯಾವುದೇ ಮುಂಬಡ್ತಿ ಪ್ರಕ್ರಿಯೆಯು ನಡೆದಿರುವುದಿಲ್ಲ. ಆದುದರಿಂದ ಮಾಹಿತಿಯು ಶೂನ್ಯವಾಗಿರುತ್ತದೆ. | | | | | | |

**ದಿನಾಂಕ:** 29-12-2022
**ಸ್ಥಳ:** ಬೆಂಗಳೂರು

**Signed by Raj Kishore Singh, Ifs**
**Date: 31-12-2022 18:50:21**

**ಪ್ರಧಾನ ಮುಖ್ಯ ಅರಣ್ಯಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)